

# ಪ್ರೀತಿಯ ಗಾಳ ದ್ವೇಷದ ವಿಷ

## ದಿವ್ಯಾ ಎಂ.ಉರುಡುಗ

**ಕಲರ್ಸ್ ಕನ್ನಡದ 'ಓಂ ಶಕ್ತಿ ಓಂ ಶಾಂತಿ'ಯ ಶಕ್ತಿ**

★ *ನಿಮ್ಮ ಸಿಟ್ಟು ಆಕ್ರೋಶವನ್ನು ಪ್ರತಿಭಟಿಸಿದ್ದು ನೆನಪಿದೆಯಾ?*

ಬೆಂಗಳೂರಿಗೆ ಬಂದ ಹೊಸತರಲ್ಲಿ ನಮ್ಮ ದೊಡ್ಡಮ್ಮನ ಮನೆಗೆ ಬಸ್‌ನಲ್ಲಿ ಹೊರಟಿದ್ದೆ. ಒಬ್ಬ ಸಹ ಪ್ರಯಾಣಿಕ ನನ್ನ ಮೇಲೆ ಕೀಟಲೆ ಮಾಡುತ್ತಿದ್ದ, ತಪ್ಪಿಸಿಕೊಳ್ಳುವ ಪ್ರಯತ್ನ ವಿಫಲವಾದವು. ತಿರುಗಿ ಕೆನ್ನೆಗೆ ಬಾರಿಸಿದೆ. ಅಷ್ಟರಲ್ಲಿ ನಿರ್ವಾಹಕ ಬಸ್ ನಿಲ್ಲಿಸಲು ಸೂಚನೆ ಕೊಟ್ಟರು. ಬಸ್ ನಿಂತ ಮೇಲೆ ಸಣ್ಣ ವಿಚಾರಣೆ ನಡೆಯಿತು. ನನಗೆ ಕೀಟಲೆ ಕೊಡುತ್ತಿದ್ದ ಕಿಡಿಗೇಡಿ ತಾನು ಏನೂ ಮಾಡಿಲ್ಲ ಎಂದು ವಾದಿಸುತ್ತಿದ್ದ. ಅದನ್ನು ನೋಡಿದ ಒಬ್ಬ ಆಂಟಿ, ಅವರ ಪಕ್ಕದಲ್ಲಿದ್ದ ಅಜ್ಜಿ ಅವನಿಗೆ ಜೋರು ಮಾಡಿ ತಾವು ನೋಡಿದ್ದಾಗಿ ಹೇಳಿದರು. ಅವನಿಗೆ ಎಲ್ಲರೂ ಬೈದು ಅಲ್ಲೇ ನಿಲ್ಲಿಸಿದರು. ಇದನ್ನು ಬಿಟ್ಟರೆ ಬೇರೆ ಯಾವ ಅಂತಹ ಘಟನೆಗಳು ಇಲ್ಲ.

★ *ಹೆಸರು 'ಶಕ್ತಿ' ಆಕೆಗೆ ಕುತಂತ್ರ ಏಕೆ ಬೇಕು?*

ಶಕ್ತಿ ನಿಜಕ್ಕೂ ಒಳ್ಳೆಯವಳು. ತನ್ನ ದ್ವೇಷ, ನೋವು, ಅಸಹಾಯಕತೆಯನ್ನು ಈಡೇರಿಸಿಕೊಳ್ಳಲು ಕುತಂತ್ರವನ್ನು ಬಿಟ್ಟರೆ ಬೇರೆ ಮಾರ್ಗ ಇಲ್ಲ. ಆಕೆಯ ಪ್ರೀತಿಯಲ್ಲಿ ಅನುಮಾನವಿಲ್ಲ. ಆದರೆ ಅದೇ ಪ್ರೀತಿಯ ಗಾಳದ ಮುಳ್ಳಿನಲ್ಲಿ ದ್ವೇಷದ ವಿಷ ಚುಚ್ಚುವ ಚಾಣಾಕ್ಷತೆ ಆಕೆಯದು.

★ *ನಿಮ್ಮ ಈ ನಾಟಕದ ನಟನೆಗೆ ಕಾರಣವಾದರೂ ಏನು?*

ನನ್ನ ಅತ್ತೆ ಆಗಲಿರುವ ನಾಗೇಶ್ವರದೇವಿ ನಮ್ಮ ಕುಟುಂಬವನ್ನೇ ಹಾಳು ಮಾಡಿದ್ದಾಳೆ. ಅಪ್ಪ– ಅಮ್ಮನ ಸಾವಿಗೆ ಕಾರಣಳಾದ ಆಕೆ. ನನ್ನ ತಂಗಿಯನ್ನು ಮೋಸದಿಂದ ಕರೆದುಕೊಂಡು ಹೋಗಿ ತನ್ನ ಹಿರಿಯ ಮಗನಿಗೆ ಮದುವೆ ಮಾಡಿಸಿಕೊಂಡಿದ್ದಾಳೆ. ಪೆದ್ದನಂತಿರುವ ಅವನಿಗೆ ಮಾನಸಿಕ ಸಮಸ್ಯೆ ಕೂಡ ಇದೆ. ಬೇರೆ ಎಲ್ಲೂ ಹೆಣ್ಣು ಸಿಕ್ಕುವುದಿಲ್ಲ ಎಂದು ನನ್ನ ತಂಗಿಯನ್ನು ಕದ್ದಿದ್ದಾಳೆ. ಇದು ನನಗೆ ಗೊತ್ತಿಲ್ಲ. ನನ್ನ ತಂಗಿನೂ ಅಪ್ಪ, ಅಮ್ಮನ ಜೊತೆ ಸತ್ತಿದ್ದಾಳೆ ಎಂದೇ ಭಾವಿಸಿದ್ದೇನೆ. ಅವರ ಸಾವಿಗೆ ಕಾರಣಳಾದವಳನ್ನು ಸುಮ್ಮನೆ ಬಿಡಬಾರದು ಎಂದು ಲೆಕ್ಕ ಹಾಕುತ್ತೇನೆ. ಆಗ ನನಗೆ ಸಿಕ್ಕ ಸೂತ್ರ ಆಕೆಯ ಕಿರಿಯ ಮಗನನ್ನು ಮದುವೆಯಾಗಿ ಅವರಮ್ಮನನ್ನು ಮಟ್ಟ ಹಾಕುವುದು ಎಂದು. ಆಕೆಯ ಮೇಲೆ ಮತ್ಸರವನ್ನು ಬಿಟ್ಟರೆ, ಪ್ರೀತಿಸುವ ಹುಡುಗನಿಗೆ ಮೋಸ ಇಲ್ಲ.

★ *ನಟಿಯಾಗಿ ಏನೋ ಕಳೆದುಕೊಂಡಿದ್ದೇನೆ ಅಂತ ವೇದನೆಯಾಗುತ್ತಾ?*

ಹಾಗೇನೂ ಇಲ್ಲ. ಇಲ್ಲಿಗೆ ಬರುವಾಗಲೇ ನಾನು ಸಿಕ್ಕ ಅವಕಾಶವನ್ನು ತ್ಯಾಗ ಮಾಡಿ ಬಂದಿದ್ದೇನೆ. ಇದು ನನ್ನ ಉದ್ದೇಶಿತ ಆಯ್ಕೆಯಾಗಿದ್ದರಿಂದ ಅಂತಹ ವೇದನೆಪಡುವ ಸಂದರ್ಭ ಬಂದಿಲ್ಲ. ಮಂಗಳೂರಿನಲ್ಲಿ ಬಿಎಸ್ಸಿ ಮಲ್ಟಿಮೀಡಿಯಾ ಮುಗಿಸಿದೆ. ಅಂತಿಮ ವರ್ಷದಲ್ಲಿದ್ದಾಗಲೇ ಇಂಗ್ಲೆಂಡ್ ಮೂಲದ ಕಂಪೆನಿಯೊಂದರಲ್ಲಿ ವೆಬ್ ಡಿಸೈನರ್ ಆಗಿ ನೇಮಕ ಕೂಡ ಆದೆ. ಅಷ್ಟರಲ್ಲಿ ನಟನೆಗೆ ಅವಕಾಶಗಳು ಬಂದವು. ನನ್ನ ಪೋಷಕರೂ ಕೂಡ ನನ್ನಿಚ್ಛೆಯನ್ನು ಬೆಂಬಲಿಸಿದ್ದರಿಂದ ತೆರೆಗೆ ಬಂದಿದ್ದೇನೆ. ಸೃಜನಶೀಲವಾಗಿ ಕೆಲಸ ಮಾಡಬೇಕು ಎನ್ನುವುದು ನನ್ನ ಆಸೆ. ವೆಬ್ ಡಿಸೈನರ್ ಆಗಿದ್ದರೂ ಅದನ್ನೇ ಮಾಡುತ್ತಿದ್ದೆ. ಅದನ್ನೇ ಇಲ್ಲಿ ಮಾಡುತ್ತಿದ್ದೇನೆ ಎನ್ನುವ ಸಂತೋಷ ಇದೆ.

★ *ಮತ್ತೆ ಯಾವತ್ತಾದರೂ ಬೇರೆ ದಿಕ್ಕಿಗೆ ತಿರುಗುವ ಸಾಧ್ಯತೆ ಉಂಟಾ?*

ಸದ್ಯ ನನಗೆ ಇರುವ ಅನುಭವ, ವಯಸ್ಸಿನ ದೃಷ್ಟಿಯಿಂದ ನಟಿಯಾಗಿಯೇ ಇರುತ್ತೇನೆ. ಮುಂದೆ ಸಿನಿಮಾದಲ್ಲಿ ನಟಿಸಲೇ ಬೇಕು ಎನ್ನುವ ಅಪೇಕ್ಷೆ ಇದೆ. ಮುಂದೆ ಅನುಭವ ಮಾಗಿಸುತ್ತಾ ಹೋದರೆ ನಿರ್ದೇಶನ, ನಿರ್ಮಾಣದತ್ತವೂ ಯೋಚಿಸಬಹುದು. ಸದ್ಯ ನಟಿ ಮಾತ್ರ.

★ *ಬೆಂಗಳೂರು ಹೇಗೆನಿಸುತ್ತದೆ? ನಿಮ್ಮೂರಿನ ನೆನಪು ಕಾಡುತ್ತಾ?*

ಬೆಂಗಳೂರಿನ ಜನದಟ್ಟಣೆ, ವಾಹನ ದಟ್ಟಣೆಯ ಕಾರಣಕ್ಕೆ ಮಾತ್ರ ಅಲ್ಲ, ಇಲ್ಲಿನ ವಾತಾವರಣವೇ ಭೀತಿಯನ್ನು ಹುಟ್ಟಿಸುವಂತಿದೆ. ನನ್ನೂರು ತೀರ್ಥಹಳ್ಳಿ. ಅಲ್ಲಿನ ಗಿಡ, ಮರ, ಬಳ್ಳಿಯ ಸ್ಪರ್ಶದಲ್ಲಿ ಬೆಳೆದವಳಿಗೆ ನನ್ನೂರೇ ನನಗೆ ನೂರು ಪಾಲು ವಾಸಿ. ಆದರೆ ಇದು ಅನಿವಾರ್ಯ. ನನಗೆ ನನ್ನೂರ ಜನ, ಅಲ್ಲಿನ ಪ್ರಕೃತಿ ಪ್ರಭಾವ ಬೀರಿದೆ. ಅದರ ನೆನಪೇ ನನ್ನನ್ನು ಪುಳಕಗೊಳಿಸುತ್ತದೆ.

★ *ನಿಮ್ಮ ಹಿನ್ನೆಲೆಯನ್ನು ಹೇಳಿ?*

ಅಮ್ಮ ಕುಸುಮಾ ಮಂಜುನಾಥ್ ತಾಲ್ಲೂಕು ಪಂಚಾಯಿತಿ ಅಧ್ಯಕ್ಷೆ. ಅಪ್ಪ ಯು.ಜಿ.ಮಂಜುನಾಥ್ ಅರಣ್ಯ ಇಲಾಖೆಯಲ್ಲಿದ್ದಾರೆ. ಅವರ ಪ್ರೋತ್ಸಾಹವೇ ನನ್ನ ಬೆನ್ನೆಲುಬು. ಹಾಡುತ್ತೇನೆ, ಡಾನ್ಸ್ ಮಾಡುತ್ತೇನೆ. ಜತೆಗೆ ನಟಿಸುತ್ತೇನೆ. ಯಾವುದನ್ನೂ ನಾನು ತರಗತಿಗೆ ಹೋಗಿ ಕಲಿತಿಲ್ಲ. ಎಲ್ಲವನ್ನೂ ರೂಢಿಸಿಕೊಂಡಿದ್ದೇನೆ.

■ ರಾಗು